ಸಾಂಸಾರಿಕ ಬದುಕು ಕೈಯಿಂದ ಜಾರಿಹೋಗಿತ್ತು. ಮತ್ತೆ ಅವನ ಜೊತೆಗಿನ ಬದುಕಿಗೆ ಮರಳುವ ಸಾಧ್ಯತೆಯೇ ಇರಲಿಲ್ಲ. ಅವನ 'ಹೊರಗಿನ ಸಂಬಂಧ'ಗಳನ್ನು ಪ್ರಶ್ನಿಸಿದೆ ಎಂಬ ಕಾರಣಕ್ಕೆ ಹಿಗ್ಗಾ ಮುಗ್ಗಾ ಹೊಡೆದಿದ್ದ ಗಂಡನನ್ನು ನೆನೆದು, "ರಾಕ್ಷಸ... ರಾಕ್ಷಸ..." ಎಂದು ನಾನೂ ದನಿಗೂಡಿಸಿದೆ.

ನಮ್ಮ ಇರಾಕಿನ ಗೆಳೆಯ ಅಬ್ದುಲ್ ಅಜೀಜ್ ಮೆಲ್ಲಗೆ ಹುಸೇನನ ಬೆನ್ನನ್ನು ಸವರಿ ಸಮಾಧಾನಿಸಿದ.

ಕೆಲ ನಿಮಿಷಗಳ ಕಾಲ ನಮ್ಮ ಟೇಬಲ್ಲಿನ ವೈನಿನಲ್ಲಿ ಮೌನ ತುಂಬಿಕೊಂಡು ನಮ್ಮೆದೆಗಳನ್ನು ಸುಟ್ಟಿತು. ಆ ಮೌನವನ್ನು ಸಹಿಸುವುದು ಒಂದರ್ಥದಲ್ಲಿ ಎಲ್ಲರಿಗೂ ಕಷ್ಟವಾಗುತ್ತ ಹೋಯಿತು.

ಅದನ್ನು ಮುರಿದು ನಡುವೆ ಮಾತಾಡಿದವನು ಡಿಮಿಟ್ರಿ.

"ನೇರವಾಗಿ ಯುದ್ಧವಾದರೆ ಒಂದು ಥರ. ಆದರೆ, ಬಾಂಬು – ಗುಂಡುಗಳಿಲ್ಲದೆಯೂ ನೀವೊಂದು ಇಕ್ಕಟ್ಟಿನಲ್ಲಿ ಇರಬಹುದು. ನಿಮ್ಮನ್ನು ಸದಾ ಯಾರಾದರೂ ಗಮನಿಸುತ್ತಿರಬಹುದೆಂಬ ಗುಮಾನಿ ಬಂದರೆ ಅದು ಇನ್ನೊಂದು ರೀತಿಯ ಕಿರಿಕಿರಿ..."

"ನೀನೊಬ್ಬ ವೈದ್ಯ... ನಿನ್ನ ಮೇಲೆ ಯಾರ ಕಣ್ಣು?'' ಅರ್ಥವಾಗದೆ ಕೇಳಿದೆವು.

ರಷ್ಯಾ ಸರ್ಕಾರವೇ ಡಿಮಿಟ್ರಿಯ ಓದಿಗಾಗಿ ಹಣ ಖರ್ಚು ಮಾಡಿ ಅವನನ್ನು ಇಂಗ್ಲೆಂಡಿಗೆ ಕಳಿಸಿತ್ತು. ಓದು ಮುಗಿಸಿ ರಷ್ಯಾಕ್ಕೆ ಹಿಂತಿರುಗಿದ ಮೇಲೆ ಸರ್ಕಾರದ ಒಪ್ಪಂದದ ಪ್ರಕಾರ ಏಳು ವರ್ಷ ಅವರು ಹೇಳಿದಂತೆ, ಕೇಳಿದಷ್ಟು ಕೆಲಸ ಮಾಡಬೇಕಿತ್ತು. ಆ ನಿಗದಿತ ಕಾಲದಲ್ಲಿ ಅವನ ಸಂಬಳದಲ್ಲಿಯೇ ಅವನನ್ನು ಓದಿಸಿದ ಖರ್ಚೆಲ್ಲವನ್ನೂ ಸರ್ಕಾರ ಕಂತುಗಳಲ್ಲಿ ಹಿಡಿದುಕೊಳ್ಳುತ್ತಿತ್ತು. ಅಂತಹ ಒಂದು ಒಪ್ಪಂದಕ್ಕೆ ಸಹಿ ಹಾಕಿ ಅವನು ಇಂಗ್ಲೆಂಡಿಗೆ ಬಂದಿದ್ದ.

"ಹಾಂ... ಯಾರಿಗ್ಗೊತ್ತು, ರಷ್ಯಾ ನಿಮ್ಮೆಲ್ಲರನ್ನೂ ಗಮನಿಸುತ್ತಿದೆ ಅಂದ್ಕೊಳಿ?''

"ನಮ್ಮನ್ನಾ... ಯಾಕೆ?''

"ನೀವೆಲ್ಲ ನನ್ನ ಜೊತೆಯಲ್ಲಿದ್ದೀರಲ್ಲ, ಅದಕ್ಕೆ?''

"ನಿನ್ನ ಜೊತೆಲಿರೋದಕ್ಕಾ? ನೀನೇನು ಮಾಡಿದ್ದೀಯಾ ಅಂಥದ್ದು?..." ಎಲ್ಲರಿಗೂ ಒಂಥರಾ ಗಾಬರಿಯಾಗಿತ್ತು. ಅವನ್ಯಾವ ರೀತಿಯ ಒಪ್ಪಂದಕ್ಕೆ ಸಹಿ ಹಾಕಿ ಬಂದಿದ್ದಾನೋ ಎನ್ನುವ ಗುಮಾನಿಯೂ ಕಾಡಿತು.

"ಯಾರಿಗೆ ಗೊತ್ತು? ನಿಮ್ಮಲ್ಲಿ ಯಾರಾದರೂ ಎಂ 25ನ ಏಜಂಟರಿದ್ದಾರೆಯೇ?..."

"ಹೇಯ್ ಡಿಮಿಟ್ರಾವ್... ನಾವೆಲ್ಲ ವೈದ್ಯರು... ನಮಗೆ ಗೂಢಚಾರಿಕೆ ಯಾಕೆ ಬೇಕು?"

"ಆ ಪ್ರಶ್ನೆಯನ್ನು ನನ್ನ ದೇಶಕ್ಕೆ ಕೇಳಿ... ನಾನು ಇಲ್ಲಿರುವಾಗ ಏನು ಮಾಡ್ತೀನಿ, ಯಾರ ಜೊತೆ ಬೆರೀತೀನಿ, ಏನು ಮಾತಾಡ್ತೀನಿ... ಎಲ್ಲ ಕೆ.ಜಿ.ಬಿ.ಗೆ ಬೇಕು. ನಾನಿಲ್ಲಿರುವಾಗ ಯಾರಾದರೂ ನನ್ನನ್ನು ಡಬಲ್ ಏಜೆಂಟ್ ಮಾಡಿಕೊಂಡರೆ?..."

ಇದೀಗ ನಾನು ಸಣ್ಣಗೆ ಬೆವೆತೆ. ಅಂದರೆ, ಇವನ ಜೊತೆಯಲ್ಲಿ ಸಾಹಸ ಚಟುವಟಿಕೆಗಳಲ್ಲಿ ಓಡಾಡುತ್ತಿದ್ದ ನಾನು ಕೂಡ... ಕೆ.ಜಿ.ಬಿ.ಯ ಗಮನಕ್ಕೆ... ಅಯ್ಯೋ ನಾನಿದೆಲ್ಲ ಊಹಿಸಲೂ ಸಾಧ್ಯವಿರಲಿಲ್ಲ. ಎದೆ ಜಗ್ಗೆಂದಿತು. ಮಗನ ನೆನಪಾಯಿತು. ಯಾವುದೋ ಸಿನಿಮಾದಲ್ಲಿ ನಾನು ಪಾತ್ರವಾದಂತೆ ಅನ್ನಿಸಿತು.

''ಥ್ರಿಲ್ಲಿಂಗ್...'' ಎಂದು ನಕ್ಕೆ.

"ಅಲ್ಲ, ನಿನ್ನನ್ನು ಡಬಲ್ ಏಜಂಟ್ ಮಾಡಿಕೊಂಡರೂ ನಿನಗೇನು ಗೊತ್ತು? ನೀನೊಬ್ಬ ವೈದ್ಯ... ರೋಗಿಗಳ ಜೊತೆ ಓಡಾಡುವ ನೀನು ಇಂಗ್ಲೆಂಡಿಗೆ ಯಾವ ಇಂಟಲಿಜೆನ್ಸ್ ನೀಡಲು ಸಾಧ್ಯ?" ಅಬ್ದುಲ್ ಅಜೀಜ್ ಬಿಡದೆ ಕೇಳಿದ.

"ಹಾಗಲ್ಲ... ನನ್ನನ್ನು ಯಾವ ರೀತಿ ಬೇಕಾದರೂ ಬಳಸಿಕೊಳ್ಳಬಹುದಲ್ಲ... ಉದಾಹರಣೆಗೆ